# ಹಸಿರು ಔಷಧ

**ಡಾ. ಕೆ. ಕೌಶಲ್ (ಪಿ. ಹೆಚ್.ಡಿ. ಎಂ.ಡಿ. ಆರ್ಯುವೇದಾಚಾರ್ಯ)**

ಪ್ರತಿ ನೋವು ಹಾಗೂ ಯಾತನೆಯ ಕತೆಯಲ್ಲು, ಒಂದು ಉಳಿವಿನ ಆಶಾಕಿರಣದ ಕಥೆಯಿರುತ್ತದೆ. ಹಾಗೇ ಪ್ರತಿ ಆಧುನಿಕ ಚಿಕಿತ್ಸಾಕ್ರಮದಂತೆ, ಸಾಂಪ್ರದಾಯಿಕ ಚಿಕಿತ್ಸಾಕ್ರಮಗಳು ಇವೆ. ಕಡೆಯಲ್ಲಿ ಹೇಳಿರುವ ಕ್ರಮಕ್ಕೆ ವೈಜ್ಞಾನಿಕ ಆಧಾರದ ದೃಢೀಕರಣವಿಲ್ಲದೇ ಇದ್ದರೂ, ಅಲೋಪಥಿ ಔಷಧಗಳಲ್ಲಿ ವೈಫಲ್ಯತೆ ಕಂಡವರಿಗೆ ಇದು ಆಶಾ ಭಾವನೆಯ ನಿಶ್ಚಿತವಾಗಿ ತಂದೊಡ್ಡಿದೆ.

ಜಯಪುರದಲ್ಲಿರುವ ಡಾ. ನಂದಲಾಲ್ ತಿವಾರಿ ಕ್ಯಾನ್ಸರ್ ರಿಸರ್ಚ್ ಕೇಂದ್ರದಲ್ಲಿ ನೀಡುತ್ತಿರುವ ಆಯುರ್ವೇದೀಯ ಚಿಕಿತ್ಸಾವಿಧಾನವು ಕಳೆದ 25 ವರ್ಷಗಳಿಂದ ಸಾವಿರಾರು ಜನರನ್ನು ಗುಣಮುಖರಾಗಿಸಿರುವ ಆಶಾಭಾವನೆ ಮೂಡಿಸಿರುವ ಅಂತಹ ಒಂದು ಚಿಕಿತ್ಸಾ ವಿಧಾನ. ಇದರ ಫಲಿತಾಂಶಗಳು ಎಲ್ಲಾ ಹಂತದ ಕ್ಯಾನ್ಸರ್ ರೋಗಿಗಳಲ್ಲೂ ಎಷ್ಟು ಸುಸಂಬದ್ಧವಾಗಿದೆ ಎಂದರೆ ಯು.ಕೆ.ಯಲ್ಲಿನ ಡಾಕ್ಟರ್‌ಗಳು ಸಹ ತಮ್ಮ ರೋಗಿಗಳಿಗೆ ಡಿ.ಎನ್.ಟಿ.ಸಿ.ಟರ್.ಸಿ.ಯ ಔಷಧಗಳನ್ನು ನೀಡುತ್ತಿದ್ದಾರೆ. "ಕಾರ್ಕ್‌ಟಾಲ್" ಎಂದು ಕರೆಯಲ್ಪಡುವ ಈ ಔಷಧಿ ಎಂಟು ಗಿಡಮೂಲಿಕೆಗಳ ಮಿಶ್ರಣ.

ಡಾ. ತಿವಾರಿಯವರು ಕ್ಯಾನ್ಸರ್ ಚಿಕಿತ್ಸಾ ವಿಧಾನದ ಬಗ್ಗೆ ಬಹಳಷ್ಟು ಹಿಂದೆಯೇ, ಅಂದರೆ ಅವರು ಅಸ್ಸಾಂ ಮತ್ತು ಡಾರ್ಜಿಲಿಂಗ್ ಟೀ ತೋಟಗಳಲ್ಲಿ ಸಹಾಯಕ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾಗಲೇ ಕೆಲಸಮಾಡಲಾರಂಬಿಸಿದರು. "ನನಗೆ ಪ್ರತಿನಿತ್ಯವು ಗುಡ್ಡ ಹಾಗೂ ಕಾಡುಗಳಲ್ಲಿ ತಿರುಗಾಡುವುದು ಮತ್ತು ಗಿಡಮೂಲಿಕೆಗಳನ್ನು ಹುಡುಕುವುದು ಒಂದು ಹವ್ಯಾಸವಾಗಿತ್ತು. ಆ ಸಮಯದಲ್ಲಿ ನಾನು ಆ ಪ್ರದೇಶದ ಆದಿವಾಸಿ ಕುಟುಂಬಗಳ ಹಿರಿಯ ಸದಸ್ಯರನ್ನು ಭೇಟಿಯಾಗುತ್ತಿದೆ, ಅವರು ನನಗೆ ಸರಿಯಾದ ಗಿಡಮೂಲಿಕೆಯನ್ನು ಆಯ್ದುಕೊಂಡು ಅವುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಮಿಶ್ರಣ ಮಾಡಿ ಕ್ಯಾನ್ಸರ್ ರೋಗಿಗಳಿಗೆ ಹೇಗೆ ಚಿಕಿತ್ಸೆ ನೀಡಬಹುದು ಎಂಬ ಅತೀ ಮಹತ್ವದ ವಿಷಯಗಳನ್ನು ಹೇಳಿಕೊಡುತ್ತಿದ್ದರು" ಎನ್ನುತ್ತಾರೆ ಅವರು.

**ಕಾರ್ಕ್‌ಟಾಲ್ ಕ್ಯಾನ್ಸರ್ ಚಿಕಿತ್ಸೆಗೆ ಡಾ. ನಂದಲಾಲ್ ತಿವಾರಿ ಕ್ಯಾನ್ಸರ್ ರಿಸರ್ಚ್ ಸೆಂಟರಿನವರು ಕಂಡುಹಿಡಿದ ಒಂದು ಗಿಡಮೂಲಿಕಾ ಚಿಕಿತ್ಸಾ ವಿಧಾನವಾಗಿದ್ದು ಇದು ಕ್ಯಾನ್ಸರ್ ನೊಂದಿಗೆ ಹೋರಾಡುತ್ತಿರುವ ಅನೇಕ ರೋಗಿಗಳಿಗೆ ಈ ರೋಗದ ವಿರುದ್ಧ ಸೆಣಸಲು ಸಹಾಯ ಮಾಡಿದೆಯಲ್ಲದೆ ಯು.ಕೆ ಯಲ್ಲಿನ ವೈದ್ಯರು ಸಹ ರೋಗಿಗಳಿಗೆ ಇದನ್ನು ನೀಡುತ್ತಿದ್ದಾರೆ.**

ಡಾ. ತಿವಾರಿಯವರು ಅವರ ಸಂಶೋಧನೆ ಮತ್ತು ಅವಿಷ್ಕಾರಗಳನ್ನು ಸುಮಾರು 20 ವರ್ಷಗಳ ಕಾಲ ನಡೆಸಿ ಕ್ಯಾನ್ಸರ್ ಚಿಕಿತ್ಸೆಗೆ ಅತ್ಯಂತ ಸಮಂಜಸವಾದ ಒಂದು ಮಿಶ್ರಣವನ್ನು 1979ರಲ್ಲಿ ಕಂಡುಹಿಡಿದರು. 1900 ರೋಗಿಗಳ ಒಂದು ಅಧ್ಯಯನದ ಪ್ರಕಾರ ಹರ್ಬಲ್ ಕಂಪೌಂಡ್ ತೆಗೆದುಕೊಂಡು ನಿಯಮಿತ ಜೀವನಕ್ರಮ ಅನುಸರಿಸಿದ ಕಾಲು ಭಾಗದವರಲ್ಲಿ 75%ದಿಂದ 100% ಶೇಖಡ ಲಾಭವನ್ನು, ಅರ್ಧ ಭಾಗದವರಲ್ಲಿ 25%ರಿಂದ 75% ಶೇಖಡ ಲಾಭವನ್ನು, ಇನ್ನುಳಿದ 25% ಶೇಖಡ ಜನರಿಗೆ ಸ್ವಲ್ಪವೇ ಅಥವಾ ಏನೂ ಫಲಕಾರಿಯಾಗದೇ ಹೋದದ್ದು ಕಂಡು ಬಂದಿದೆ. ಇಲ್ಲಿ "ಲಾಭ" ಎಂದರೆ ಹೆಚ್ಚು ತೂಕ ಗಳಿಕೆ, ಹೆಚ್ಚು ಶಕ್ತಿ ಗಳಿಕೆ ಹಾಗೂ ಹೆಚ್ಚು ಪ್ರಶಾಂತತೆಯನ್ನು ಪಡೆಯುವುದು ಎಂದು ಅರ್ಥೈಸಿಕೊಳ್ಳಬಹುದು.

**ಆಹಾರದಲ್ಲಿ ಬೇಕು / ಬೇಡಗಳು**

ಈ ಔಷಧಿಯನ್ನು ಎಲ್ಲಾ ರೀತಿಯ ಕ್ಯಾನ್ಸರ್ ಇರುವವರಿಗೂ ನೀಡಲಾಗುತ್ತದೆಯಾದರೂ ಔಷಧ ಸೇವನೆಯ ಸಮಯದಲ್ಲಿ ಆಹಾರ ಪದ್ಧತಿಯಲ್ಲಿ ಕೆಲವೊಂದು ಬೇಕು ಬೇಡಗಳನ್ನು ಅನುಸರಿಸುವುದು ಅಗತ್ಯ. ಕ್ಷಾರ ಗುಣವುಳ್ಳ ಸಸ್ಯಾಹಾರಿ ಆಹಾರ, ಜೀರ್ಣಕಾರಿಯಾದ ಒಂದು ಕಿಣ್ವ ಹಾಗೂ ಕಾಯ್ದಾರಿಸಿದ 3–5ಲೀಟರ್ ನೀರನ್ನು ಕುಡಿಯಲು ಸಲಹೆ ನೀಡಲಾಗುತ್ತದೆ. ಹುಳಿ ಪದಾರ್ಥ ಮತ್ತು ಪ್ರಿಸರ್ವೇಟಿವ್ ಬಳಸಿದ ಯಾವುದೇ ಪದಾರ್ಥಗಳನ್ನು ನಿಷೇಧಿಸಲಾಗುತ್ತದೆ. ಇದು ಕ್ಯಾನ್ಸರ್ ದೇಹದಲ್ಲಿನ ಅತಿಯಾದ ಆಮ್ಲದ ಮಟ್ಟಕ್ಕೆ ಸಂಬಂಧಿಸಿದೆ ಎಂಬ ವಾದದ ಮೇಲೆ ಆಧರಿತವಾಗಿದೆ. ಈ ಅತೀ ಆಮ್ಲದ ಮಟ್ಟವನ್ನು ಸಲಹೆ ನೀಡಿದ ಪಥ್ಯವನ್ನು ಅನುಸರಿಸುವುದರಿಂದ ಕಡಿಮೆಗೊಳಿಸಿ, ನಂತರ ಕ್ಯಾನ್ಸರ್‌ಗೆ ಚಿಕಿತ್ಸೆ ನೀಡಲಾಗುತ್ತದೆ. ಜೀರ್ಣಕಾರಿ ಕಿಣ್ವದ ನೀಡಿಕೆ ಜೀರ್ಣಶಕ್ತಿ ಸುಧಾರಿಸಲು ಮತ್ತು ಔಷಧವನ್ನು ದೇಹವು ಸರಿಯಾಗಿ ಹೀರಿಕೊಳ್ಳಲಿ ಎಂದಾಗಿರುತ್ತದೆ.

**ಎಲ್ಲಾ ಹಂತಗಳಲ್ಲೂ ಚಿಕಿತ್ಸೆ ನೀಡಬಹುದು**

ಡಿ.ಎನ್.ಟಿ.ಸಿ.ಟರ್.ಸಿ.ಯಲ್ಲಿ ಹೆಚ್ಚಾಗಿ ಕೊನೆಯ ಹಂತದಲ್ಲಿರುವ ರೋಗಿಗಳು, ಅಂದರೆ ಆಧುನಿಕ ಚಿಕಿತ್ಸಾವಿಧಾನವನ್ನು ಸಂಪೂರ್ಣವಾಗಿ ಬಳಸಿ ವಿಫಲಗೊಂಡು, ಶಸ್ತ್ರಚಿಕಿತ್ಸೆಯ ಅತಿಯಾದ ಅಪಾಯಗಳಿಗೆ ಒಳಗಾಗಲು ಇಷ್ಟ ಪಡದೇ ಇರುವವರೇ ಹೆಚ್ಚಾಗಿ ಬರುತ್ತಾರೆ. 36 ವರ್ಷದ ಮೀನಾಕ್ಷಿ ಗುಜ್ಜಾರ್ ಅವರಿಗೆ ಬ್ರೈನ್ ಟ್ಯೂಮರ್ ಆಗಿ ಅವರ ಆರೋಗ್ಯವನ್ನು ಬಹಳಷ್ಟು ಹದಗೆಡಿಸಿತ್ತು. ಅವರ ದೃಷ್ಟಿ ಹೋಗಿತ್ತು, ಮುಖದ ಎಡ ಭಾಗಕ್ಕೆ ಲಕ್ವ ಹೊಡೆದಿತ್ತು ಮತ್ತು ಅವರಿಗೆ ಪದೇ ಪದೇ ಅಪಸ್ಮಾರ ಬರುತ್ತಿತ್ತು. ವೈದ್ಯರು ಅವರ ಕುಟುಂಬದವರಿಗೆ ಒಂದು ಶಸ್ತ್ರಚಿಕಿತ್ಸೆಯ ಅಗತ್ಯವನ್ನು ತಿಳಿಸಿದರು ಅದು ಆ ಹಂತದಲ್ಲಿ ಬಹಳ ಅಪಾಯಕಾರಿ ಹೆಜ್ಜೆಯಾಗಿತ್ತು. "ಆ ಸಮಯದಲ್ಲಿ ನಾವು ಪರ್ಯಾಯ ಚಿಕಿತ್ಸಾ ಕ್ರಮವನ್ನು ಹುಡುಕುತ್ತಿದ್ದಾಗ ನಮಗೆ ಡಿ.ಎನ್.ಟಿ.ಸಿ.ಟರ್.ಸಿ.ಯ ಎದುರಾಯಿತು. ಡಿ.ಎನ್.ಟಿ.ಸಿ.ಟರ್.ಸಿ.ಯಲ್ಲಿನ 3 ತಿಂಗಳ ಚಿಕಿತ್ಸೆಯ ನಂತರ ಅವರಲ್ಲಿ ಒಂದು ರೀತಿಯ ಸುಧಾರಣೆ ಕಂಡುಬಂದಿತು. ಐದೇ ತಿಂಗಳಲ್ಲಿ ಅವರ ದೃಷ್ಟಿ ಹಿಂತಿರುಗಿ ಪಾರ್ಶ್ವವಾಯು ಮಾಯವಾಗಿತ್ತು" ಎನ್ನುತ್ತಾರೆ ಮೀನಾಕ್ಷಿಯವರ ಪತಿ ನಾರಾಯಣ್ ಗುಜ್ಜಾರ್. ಇಂದು ಅವರ ಅರೋಗ್ಯ ಹಿಂದಿರುಗಿದೆ ಮತ್ತು ಆ ಖಾಯಿಲೆ ತಿರುಗಿ ಬಂದಿಲ್ಲ.

ಈ ಆಯುರ್ವೇದಿಯ ಚಿಕಿತ್ಸೆ ರೋಗಿಗಳಿಗೆ ಆಧುನಿಕ ಚಿಕಿತ್ಸಾ ವಿಧಾನದ ಪಾರ್ಶ್ವ ಪರಿಣಾಮಗಳಿಂದಲೂ ಮುಕ್ತರಾಗಲು ಸಹಾಯ ಮಾಡುತ್ತದೆ. ಇಂದರ್‌ಜಿತ್ ಕೌರ್ ಅವರಿಗೆ 2005ರಲ್ಲಿ ರಕ್ತ ಕ್ಯಾನ್ಸರ್ ಇದೆ ಎಂದು ಕಂಡುಹಿಡಿಯಲಾಗಿತ್ತು. 6 ತಿಂಗಳುಗಳ ಕಾಲ ಏಐಐಎಂಎಸ್‌ನಲ್ಲಿ ಚಿಕಿತ್ಸೆಯೊಂದಿಗೆ ಕೆಮೋಥೆರಪಿಯನ್ನು ನೀಡಲಾಯಿತು. ಆದರೆ, ಅವರ ಆರೋಗ್ಯದಲ್ಲಿ ಏನೂ ಸುಧಾರಣೆ ಕಾಣದೇ, ಚಿಕಿತ್ಸೆಯ ಪಾರ್ಶ್ವ ಪರಿಣಾಮಗಳು ಅವರ ದೇಹವನ್ನು ಹಾನಿಗೊಳಗಾಗಿಸಿದ್ದವು. ಅವರಿಗೆ ತುಂಬಾ ನಿಶ್ಶಕ್ತಿಯಾಗಿ ಅವರ ರಕ್ತದಲ್ಲಿ ಹಿಮೋಗ್ಲೋಬಿನ್ ಮಟ್ಟ ಶೂನ್ಯಕ್ಕೆ ತಲುಪಿತ್ತು. "ನಾವು ಸಾಂಪ್ರಾದಾಯಿಕ ಚಿಕಿತ್ಸಾ ಕ್ರಮವನ್ನು ನಿಲ್ಲಿಸಿ ಡಿ.ಎನ್.ಟಿ.ಸಿ.ಟರ್.ಸಿ.ಯ ಚಿಕಿತ್ಸೆಯನ್ನು ಪಡೆಯಲು ನಿರ್ಧರಿಸಿದೆವು" ಎನ್ನುತ್ತಾರೆ ಹರ್ಜಿತ್ ಸಿಂಗ್, ಇಂದರ್ ಜಿತ್‌ರವರ ಪತಿ. 3 ತಿಂಗಳ ನಂತರ ಇಂದರ್‌ಜಿತ್ ಅವರಿಗೆ ಹಸಿವು ಸುಧಾರಿಸಿ ಅವರು ತೂಕವು ಹೆಚ್ಚಿತ್ತು ಮತ್ತು ದೇಹದಲ್ಲಿ ಚೈತನ್ಯ ಹೆಚ್ಚಾಗಿತ್ತು. 6 ತಿಂಗಳ ನಂತರ ಅವರು ದಿನ ನಿತ್ಯದ ಮನೆಕೆಲಸಗಳನ್ನು ಮಾಡುವಷ್ಟು ಚೇತರಿಸಿಕೊಂಡಿದ್ದರು. "ಎರಡು ವರ್ಷಗಳ ನಂತರ ತಪಾಸಣಾ ಫಲಿತಾಂಶಗಳೆಲ್ಲವೂ ಕ್ರಮಬದ್ಧವಾದ ಕಾರಣ ವೈದ್ಯರು ನಮಗೆ ಚಿಕಿತ್ಸೆಯನ್ನು ನಿಲ್ಲಿಸಲು ಹೇಳಿದರು. ಈಗ ಅವಳ ಬ್ಲಡ್ ಕೌಂಟ್ ನಾರ್ಮಲ್ ಮಟ್ಟದಲ್ಲಿದ್ದು ಯಾವುದೇ ಔಷಧಿಯ ಅಗತ್ಯವಿಲ್ಲ", ಎನ್ನುತ್ತಾರೆ ಸಿಂಗ್.

ಡಿ.ಎನ್.ಟಿ.ಸಿ.ಟರ್.ಸಿ.ಯ

ಡಿ.ಎನ್.ಟಿ.ಸಿ.ಟರ್.ಸಿ.ಯ ಚಿಕಿತ್ಸೆಯನ್ನು ಇತರ ಔಷಧಿಗಳೊಂದಿಗೆ ಯಾವುದೇ ಸಂಘರ್ಷಗಳ ಭಯವಿಲ್ಲದೆ ತೆಗೆದುಕೊಳ್ಳಬಹುದು. "ರೋಗಿ ಬಯಸಿದರೆ, ಅವರು ಅಲೋಪಥಿಕ್ ಚಿಕಿತ್ಸೆಯನ್ನು ಮುಂದುವರೆಸಿ ಈ ವಿಧಾನವನ್ನು ಏಕಕಾಲಿಕವಾಗಿ ತೆಗೆದುಕೊಳ್ಳಬಹುದು. ನಾವು ಏಐಐಎಂಎಸ್ ನಲ್ಲಿ ನಮ್ಮ ಔಷಧಿಯನ್ನು ಪರೀಕ್ಷೆಗೆ ಒಳಪಡಿಸಿ ಅದು ವಿಷವಿಲ್ಲದ ಸುರಕ್ಷಿತವಾದ ಸೇವಿಸಲು ಯೋಗ್ಯವಾದ ಔಷಧಿ ಎಂದು ದೃಢಪಡಿಸಿಕೊಂಡಿದ್ದೇವೆ.

**ಜನಪ್ರಿಯತೆಯ ಗಳಿಕೆ**

ಡಿ.ಎನ್.ಟಿ.ಸಿ.ಟರ್.ಸಿ ಕಂಡುಹಿಡಿದಿರುವ ಈ ಗಿಡಮೂಲಿಕೆಗಳ ಚಿಕಿತ್ಸೆಗೆ ಪಾಶ್ಚಾತ್ಯ ದೇಶಗಳಲ್ಲಿಯೂ ಮಾರುಹೋದವರಿದ್ದಾರೆ. ಡಾ. ರೋಸಿ ಡೇನಿಯಲ್ ಮಾಜಿ ಮೆಡಿಕಲ್ ಡೈರೆಕ್ಟರ್, ಬ್ರಿಸ್ಟಲ್ ಕ್ಯಾನ್ಸರ್ ಹೆಲ್ಪ್ ಸೆಂಟರ್, ಇವರು ಕಳೆದ 4 ವರ್ಷಗಳಿಂದ ರೋಗಿಗಳನ್ನು ಈ ಔಷಧಿ ಬಳಸಿ ಚಿಕಿತ್ಸೆ ನೀಡಿದ್ದಾರೆ. ಇಲ್ಲಿಯವರೆಗೆ ಸುಮಾರು 860 ರೋಗಿಗಳಿಗೆ ಈ ಔಷಧಿಯನ್ನು ಬಳಸುತ್ತಿದ್ದು ಅವರಲ್ಲಿ ಸುಮಾರು ಕಾಲು ಭಾಗದವರೊಂದಿಗೆ ಡಾ. ಡೇನಿಯಲ್ ಇನ್ನೂ ಸಂಪರ್ಕವಿಟ್ಟುಕೊಂಡಿದ್ದಾರೆ. ಅವರಲ್ಲಿ ಕ್ಯಾನ್ಸರ್ ಗ್ರಂಥಿಗಳು ಹೆಚ್ಚು ಹರಡದೆ ಸಂಕುಚಿತವಾಗಿವೇ ಅಥವಾ ಮಾಯವಾಗಿವೆ, ಅವರು ಇದು ಎಷ್ಟು ಜನರಲ್ಲಿ ಆಗಿದೆ ಎಂಬುದನ್ನು ಲಕ್ಕವಿಟ್ಟಿಲ್ಲ. "ಈ ಕೆಲವು ವರ್ಷಗಳಲ್ಲಿ ನಾನು ಕಾರ್ಕ್‌ಟಾಲ್ ಅನ್ನು ರೋಗಿಗಳಿಗೆ ನೀಡಲು ಆರಂಭಿಸಿದಾಗಿನಿಂದ ಕೆಲವೊಂದು ಅದ್ಭುತವೆನಿಸುವಂತಹ ಸುಧಾರಣೆಯನ್ನು ಕಂಡಿದ್ದೇನೆ. ಆಶ್ಚರ್ಯಕರ ಫಲಿತಾಂಶಗಳು ಹೆಚ್ಚುತ್ತಿದ್ದು, ವಿಜ್ಞಾನದ ಚೈತನ್ಯವಾಗಿ ಈ ವಿಷಯವನ್ನು ನಾನು ಹೊರ ಪ್ರಪಂಚಕ್ಕೆ ತಿಳಿಸಲು ಇಚ್ಛಿಸುತ್ತೇನೆ.

ಡಿ.ಎನ್.ಟಿ.ಸಿ.ಟರ್.ಸಿ " ಚಿಕಿತ್ಸಾ ಕ್ರಮ ಮತ್ತು ಜೀವನ ಶೈಲಿ ಬದಲಾಯಿಸಿಕೊಂಡ ಶೇಕಡ 60–70% ಜನರಲ್ಲಿ ಮಾತ್ರ ಈ ವಿಧಾನ ಫಲಿತಾಂಶ ನೀಡಿದೆ ಎಂದು ಹೇಳುತ್ತದೆ. ತಪಾಸಣೆಯ ಕೊರತೆ ಕೂಡ ಇದರ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನಾರ್ಥಕ ಚಿಹ್ನೆಯನ್ನು ಮೂಡಿಸುತ್ತದೆ. ಆದರೆ ಡಾ. ಡೇನಿಯಲ್ ಅವರು ಹೇಳುವಂತೆ " ನಿಮ್ಮ ಜೀವಕ್ಕೆ ತೊಂದರೆಯಿದ್ದು ಅದನ್ನು ಉಳಿಸಿಕೊಳ್ಳಲು ಯಾವುದಾದರೂ ಒಂದು ಆಶಾಕಿರಣದ ಮೂಲವಿದ್ದರೆ ಅದನ್ನು ತಿಳಿದುಕೊಳ್ಳುವ ಇಚ್ಛೆ ನಿಮಗೆ ಖಂಡಿತ ಇರುತ್ತದೆ. ನನಗೆ ಈ ವಿಷಯದಲ್ಲಿ ಸಂಶೋಧನೆಯ ಅಗತ್ಯವಿದೆ ಮತ್ತು ಪ್ರಯೋಗಗಳು ನಡೆಸಬೇಕಾದ್ದು ತುಂಬಾ ಅಗತ್ಯ ಎಂದು ಹೇಳಲು ಸಂತೋಷ ಪಡುತ್ತೇನೆ. ಆದರೆ ಕೆಲವು ರೋಗಿಗಳು ಆಧಾರಗಳಿಗೆ ಕಾಯುತ್ತಾ ಕೂರಲಾಗುವುದಿಲ್ಲ ಎನ್ನುತ್ತಾರೆ. ಅವರುಗಳು ಈ ಚಿಕಿತ್ಸೆ ಅವರನ್ನು ತಲುಪುವ ವೇಳೆಗೆ ಬದುಕುಳಿಯಲಾರರು.

**www.cancermedi.com . 09462654663**

ADVT.